ಓ .ಎಸ್ ನಂಃ 38/2020
ಪಿಡಬ್ಲ್ಯೂಃ 1
ದಿನಾಂಕಃ 25.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ವಿ ಎಂ ವಕೀಲರಿಂದಃ</u>

ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಬ್ಯಾಸ ಮಾಡಿದ್ದು ನಾನು ನಿವೃತ್ತ ಸೈನಿಕ. ಈಗ ಬಿಇಎಂಎಲ್ ನಲ್ಲಿ ಸೆಕ್ಯುರಿಟಿಯಾಗಿ ಕೆಲಸ ಮಾಡುತ್ತಿದ್ದೇನೆ. 1 ರಿಂದ 3 ನೇ ಪ್ರತಿವಾದಿಗಳು ಮುಸ್ಲಿಂ ಜನಾಂಗಕ್ಕೆ ಸೇರಿದವರು ಎಂದರೆ ಸರಿ . ಪ್ರತಿವಾದಿ 2 ಮತ್ತು 3 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ . ಅವರು ಉರುಗಾಂ ಪೇಟೆಯಲ್ಲಿ ವಾಸ . ಪ್ರತಿವಾದಿಗಳ ಸ್ವತ್ತು ಮಾರಾಟಕ್ಕೆ ಇದೆ ಎಂದು ನನಗೆ ಯಾರು ತಿಳಿಸಿರುತ್ತಾರೆ ಎಂದರೆ ರಾಜಾಸಿಂಗ್ ಎನ್ನುವ ಬ್ರೋಕರ್ ತಿಳಿಸಿರುತ್ತಾರೆ ಎನ್ನುತ್ತಾರೆ. ರಾಜಾಸಿಂಗ್ ನನಗೆ 15 ವರ್ಷದಿಂದ ಪರಿಚಯ. ರಾಜಾಸಿಂಗ್ ಮಾಜಿ ಎಂ ಎಲ್ ಎ ಭಕ್ತನ್ ಎನ್ನುವವರ ಆಪ್ತರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಭ್ತಕ್ತನ್ ಎನ್ನುವವರ ರಾಜಕೀಯ ಪ್ರಕರಣಗಳಲ್ಲಿ ರಾಜಾಸಿಂಗ್ ಆರೋಪಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತು ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದರೆ 1 ನೆ ಪ್ರತಿವಾದಿಯ ಹೆಸರಿಗೆ ಇದ್ದ ಬಗ್ಗೆ ಗೊತ್ತು . ಅದಕ್ಕೂ ಮುಂಚೆ ಯಾರ ಹೆಸರಿನಲ್ಲಿ ಇತ್ತು ಗೊತ್ತಿಲ್ಲ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ನೋಡಿ, ತಿಳಿದುಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಯೇ ಅಂದರೆ ಹೌದು ಎನ್ನುತ್ತಾರೆ.

ದಾವಾ ಸ್ವತ್ತಿಗೆ ಸಂಬಂಧ ಪಟ್ಟ 1 ನೇ ಪ್ರತಿವಾದಿ ಹೆಸರಿಗೆ ಇರುವ ಕ್ರಯ ಪತ್ರ ವನ್ನು ನಾನು ನೋಡಿರುತ್ತೇನೆ. ಸಾಮಾನ್ಯವಾಗಿ ಯಾವುದಾದರೂ ಸ್ವತ್ತನ್ನು ಖರೀದಿಮಾಡುವ ಪೂರ್ವದಲ್ಲಿ ಸ್ವತ್ತಿಗೆ ಸಂಬಂಧ ಪಟ್ಟ ಮಾಲಿಕತ್ವದ ದಾಖಲೆಗಳನ್ನು ಮಾಲೀಕರ ಸ್ವಾಧೀನವನ್ನು ಪರಿಶೀಲನೆ ಮಾಡಿಯೇ ಸ್ವತ್ತಿನ ಮಾತುಕತೆ ಮಾಡುತ್ತಾರೆ ಎಂದರೆ ಸರಿ . ನಾನು ದಾಖಲೆಗಳನ್ನು ಮತ್ತು ಸ್ವಾಧೀನವನ್ನು ಪರಿಶೀಲನೆ ಮಾಡಿರುತ್ತೆನೆಯೇ ಅಂದರೆ ಮಾಡಿರುತ್ತೇನೆ ಎನ್ನುತ್ತಾರೆ. ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಇ.ಸಿ ಯನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ ಎಲ್ಲಾ ಸರಿಯಾಗಿ ಇದೆ ಎಂದ ನಂತರವೇ ನಾನು ಖರೀದಿಗೆ ಒಪ್ಪಿರುತೇನೆ ಎಂದರೆ ಹೌದು ಎನ್ನುತ್ತಾರೆ. ದಾವಾ ಸ್ವತ್ತಿನ ಕ್ರಯ ಆಗುವ ಮುಂಚೆ ಕ್ರಯದ ಕರಾರು ಆಗಿತ್ತೆ ಎಂದರೆ ಇಲ್ಲ ಎನ್ನುತ್ತಾರೆ . ದಾವಾ ಸ್ವತ್ತಿನ ದಾಖಲೆಗಳನ್ನು ಪರಿಶೀಲನೆ ಮಾಡಿ ಎಷ್ಟು ದಿನಗಳ ನಂತರ ಸ್ವತ್ತಿನ ಕ್ರಯನೊಂದಣಿ

ಆಗಿರುತ್ತದೆ ಎಂದರೆ 1 ತಿಂಗಳ ನಂತರ ಈ ಖಾತಾ ಮಾಡಿಕೊಂಡು ಬಂದಾಗ ಆಗಿರುತ್ತದೆ ಎನ್ನುತ್ತಾರೆ. ಸ್ವತ್ತಿನ ಕ್ರಯಕ್ಕೆಸಂಬಂಧಿಸಿದ ಸ್ವತ್ತಿನ ಕ್ರಯದ ಮೌಲವನ್ನು ಡಿಡಿ ಮೂಲಕ ಅಥವಾ ಬ್ಯಾಂಕ್ ಮೂಲಕ ನೀಡಿರುತ್ತೇನೆಯೇ ಅಂದರೆ ನಗದಾಗಿ ಕೈಗೆ ನೀಡಿರುತ್ತೇನೆ ಎನ್ನುತ್ತಾರೆ. ಹಣವನ್ನು ಯಾವಾಗ ನೀಡಿರುತೇನೆ ಎಂದರೆ ನೊಂದಣಿ ಆಗುವಾಗ ಎನ್ನುತ್ತಾರೆ. ದಾವಾ ಸ್ವತಿನ ಕ್ರಯದ ಮಾತುಕತೆ ಆಗುವಾಗ ಯಾವುದಾದರೂ ಹಣವನ್ನು ನೀಡಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ಕ್ರಯ ನೊಂದಣಿ ಆದ ದಿನ 4 ಲಕ್ಷ 13 ಸಾವಿರ ಹಣ ನನ್ನ ಬಳಿ ಇತ್ತು ಎಂದು ತೋರಿಸಲು ಏನಾದರೂ ದಾಖಲೇಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಗಳು ನನ್ನ ದಾವೆಗೆ ಏನೆಂದು ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕ್ರಯ ಪತ್ರವನ್ನು ಯಾರು ತಯಾರಿಸಿರುತ್ತಾರೆ ಎಂದರೆ ಬಂಗಾರಪೇಟೆಯಲ್ಲಿ ತಯಾರಿಸಲಾಗಿದ್ದು ಯಾರು ಎಂದರೆ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಪತ್ರ ಬರಹಗಾರರ ಬಳಿ ನನ್ನನ್ನು ಯಾರು ಕರೆದುಕೊಂಡು ಹೋಗಿರುತ್ತಾರೆ ಎಂದರೆ ರಾಜಾಸಿಂಗ್ ರವರು ಎನ್ನುತ್ತಾರೆ. ಕ್ರಯ ಪತ್ರ ತಯಾರಾದ ನಂತರ ಅದನ್ನು ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆಯೇ ಅಂದರೆ ಹೌದು ಎನ್ನುತ್ತಾರೆ. ನಿಪಿ 2 ಕ್ರಯ ಪತ್ರದಲ್ಲಿಬರೆದಿರುವ ಎಲ್ಲಾ ಸಂಗತಿಗಳು ನಿಜವಾಗಿದೆಯೇ ಅಂದರೆ ಹೌದು ಎನ್ನುತ್ತಾರೆ. ಕ್ರಯಪತ್ರದಲ್ಲಿ ಸ್ವತ್ತನ್ನು ನೊಂದಣಿ ಮಾಡಿ ಸ್ವತ್ತಿನ ಸ್ವಾಧೀನ ನೀಡುತ್ತಿದ್ದೇವೆ ಎಂದು ಹೇಳಿ ಬರೆಸಿರುವ ವಿಚಾರ ನಿಜವಲ್ಲವೇ ಅಂದರೆ ಹೌದು ಎನ್ನುತ್ತಾರೆ. ನಿಪಿ 2 ದಾಖಲೆ ತಯಾರಾದ ನಂತರ 1 ನೆ ಪ್ರತಿವಾದಿ ಬಂಗಾರಪೇಟೆ ಬಂದು ದಾಖಲೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ . ನಿಪಿ 2 ನ್ನು 1 ನೇ ಪ್ರತಿವಾದಿ ಮಾತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ .

ನಿಪಿ 2 ರಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಪಕ್ಷಗಾರರಲ್ಲ ಎಂದರೆ ಸರಿ , ಆದರೆ ಸಾಕ್ಷಿಯಾಗಿರುತ್ತಾರೆ . ಸದರಿಯವರು ಸಾಕ್ಷಿ ಸಹಿ ಹಾಕಿದ್ದರಿಂದ ಅವರಿಗೆ ತೊಂದರೆ ಕೊಡಬೇಕೆಂದು ಈ ದಾವೆಯಲ್ಲಿ ಅವರ ಅವಶ್ಯಕತೆ ಇಲ್ಲದೇ ಇದ್ದರೂ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ರಂತೆ ಪ್ರತಿವಾದಿಗಳಿಗೆ 4 ಲಕ್ಷ 13 ಸಾವಿರ ಕ್ರಯದ ಮೌಲ್ಯ ತಲುಪಿಲ್ಲ ಎಂದರೆ ಸರಿಯಲ್ಲ . ಕ್ರಯವಾದ ದಿನ ನನ್ನ ಬಳಿ ಮೇಲೆ ಹೇಳಿದಷ್ಟು ಹಣ ಇರಲಿಲ್ಲ , ನನಗೆ ಅಷ್ಟು ಹಣ ಕೊಡುವ ಸಾಮರ್ಥ್ಯವೂ

ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಅಷ್ಟು ಹಣ ಇರಲಿಲ್ಲ , ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯವಾದ ದಿನ ರಾಜಾಸಿಂಗ್ 1 ನೇ ಪ್ರತಿವಾದಿಯನ್ನು ಕರೆತಂದು ನಿಪಿ 2 ಕ್ಕೆ ಸಹಿ ಪಡೆದಿದ್ದು ನಿಪಿ 2 ರಲ್ಲಿ ಇರುವ ಅಂಶಗಳ 1 ನೆ ಪ್ರತಿವಾದಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಗೆ ಈ ದಾವೆ ಸಲ್ಲಿಸಿದ ನಂತರವೇ 4 ಲಕ್ಷ 13 ಸಾವಿರ ಹಣ ನೀಡಿ ಕ್ರಯಪತ್ರ ಮಾಡಿಕೊಂಡಿರುತ್ತಾರೆ ಎಂದು ಪ್ರಥಮ ಬಾರಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಕ್ರಯ ಪತ್ರವಾದ ದಿನ 1 ವರೆ ಲಕ್ಷ ಹಣವನ್ನು ನಾನು ರಾಜಾಸಿಂಗ್ ರವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಒಂದು ವರೆ ಲಕ್ಷದಲ್ಲಿ ರಾಜಾಸಿಂಗ್ 50 ಸಾವಿರ ಇಟ್ಟುಕೊಂಡು ಬರೀ 1 ಲಕ್ಷ ಹಣವನ್ನು ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿ ವಿಧವೆ ಅಂದರೆ ಸರಿ . 1 ನೇ ಪ್ರತಿವಾದಿ ರಾಜಾಸಿಂಗ್ ಇಟ್ಟುಕೊಂಡು 50 ಸಾವಿರವನ್ನು ಕೊಡಿ ಎಂದು ಕೇಳಿದ್ದಕ್ಕೆ ನಾನು ಮತ್ತು ರಾಜಾಸಿಂಗ್ 1 ನೇ ಪ್ರತಿವಾದಿಗೆ ಕೊಲೆ ಬೆದರಿಕೆ ಸಹ ಹಾಕಿರುತ್ತೇವೆ ಎಂದರೆ ಸರಿಯಲ್ಲ.

ಕ್ರಯವಾದ ಸಮಯದಲ್ಲಿ 1 ನೆ ಪ್ರತಿವಾದಿಯ ಎರಡು ಮಕ್ಕಳು ಅಪ್ರಾಪ್ತ ವಯಸ್ಕಿನವರು ಎಂದರೆ ಇಲ್ಲ ಒಬ್ಬರ ಮದುವೆಯಾಗಿತ್ತು , ಇನ್ನೊಬ್ಬ ಮಗನ ಮದುವೆಯಾಗಿಲ್ಲ ಎಂದು ಹೇಳಿರುತ್ತಾರೆ ಅಪ್ರಾಪ್ತರಲ್ಲ ಎನ್ನುತ್ತಾರೆ . ನಿಪಿ 2 ರಲ್ಲಿ ರುಕ್ಸರ್ ಫಾತಿಮಾ ರವರ ಗಂಡನ ಹೆಸರು ಇಲ್ಲ ಅವರ ತಾಯಿಯ ಹೆಸರು ಇದೆ ಅವರು ಮದುವೆಯಾಗಿರಲಿಲ್ಲ ಎಂದರೆ ಅವರು ಆ ರೀತಿ ಹೇಳಿರುತ್ತಾರೆ ಎನ್ನುತ್ತಾರೆ . ಆ ರೀತಿ ಹೇಳಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲೂ ಸಹ 3 ನೇ ಪ್ರತಿವಾಯ ಗಂಡನ ಹೆಸರು ಹಾಕಿಲ್ಲ ಎಂದರೆ ಸರಿ . ರಾಜಾಸಿಂಗ್ ವಿರುದ್ದ ಸುಮಾರು ಕ್ರಿಮಿನಲ್ ಪ್ರಕರಣಗಳು ಇದ್ದು ತನ್ನ ಮಕ್ಕಳ ಜೀವನ ಹಾಳಾಗಬಾರದು ಎಂದು 1 ನೇ ಪ್ರತಿವಾದಿ ರಾಜಾಸಿಂಗ್ ಗೆ ಉಳಿದ 50 ಸಾವಿರ ಹಣವನ್ನು ವಾಪಸ್ ಕೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ . ನಿಪಿ 2 ರಲ್ಲಿ ತೋರಿಸಿದ ಕ್ರಯದ ಮೌಲ್ಯಕ್ಕೆ 1 ನೇ ಪ್ರತಿವಾದಿ ಕ್ರಯಪತ್ರ ಮಾಡಿಯೇ ಕೊಟ್ಟಿಲ್ಲ ಎಂದರೆ ಸರಿಯಲ್ಲ . ಕ್ರಯಪತ್ರವಾದ ನಂತರ ಕ್ರಯ ಪತ್ರದ ಆಧಾರದ ಮೇರೆಗೆ ನನ್ನ ಹೆಸರಿಗೆ ದಾವಾ ಸ್ವತ್ತಿನ ಖಾತಾ ತೆರೆಯಿರಿ ಎಂದು ಅರ್ಜಿ ನೀಡಿರುತ್ತೇನೆಯೇ ಅಂದರೆ ಹೌದು ಎನ್ನುತ್ತಾರೆ. ಯಾರಿಗೆ ಅರ್ಜಿ ಸಲ್ಲಿಸಿರುತ್ತೀರೀ

ಎಂದರೆ ಅರ್ಜಿ ಸಲ್ಲಿಸುವ ಮುಂಚೆ ಗಟ್ಟಕಾಮದೇನಹಳ್ಳಿ ಗ್ರಾಮಕ್ಕೆ ಹೋಗಿ ವಿಚಾರಿಸಿದಾಗ ನಾನು ಖರೀದಿಸಿದ ದಾವಾ ಸ್ವತ್ತಿನ ಈ ಖಾತಾ ನಕಲಿ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ಆ ವಿಚಾರ ನನಗೆ ಯಾವಾಗ ಗೊತ್ತಾಯಿತು ಎಂದರೆ ಕ್ರಯ ಆದ 2 ತಿಂಗಳ ನಂತರ ಹೋಗಿ ವಿಚಾರಿಸಿದಾಗ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಕ್ರಯಕ್ಕಿಂತ ಮುಂಚೆ ತೋರಿಸಿದ ಜಾಗ ಬೇರೆ ಕ್ರಯ ಆದ ನಂತರ ತೋರಿಸಿದ ಜಾಗ ಬೇರೆ ಎನ್ನುತ್ತಾರೆ. 2017 ರಲ್ಲಿ ನನಗೆ ಮಾರಾಟ ಮಾಡಿದ ಜಾಗ ಬೇರೆ ಕ್ರಯ ಮಾಡಿದ ಜಾಗ ಬೇರೆ ಎಂದು ವಿಚಾರ ಗೊತ್ತಾದ ನಂತರ ಪ್ರತಿವಾದಿಗಳಿಗೆ ವಕೀಲರ ನೋಟೀಸ್ ನೀಡಿಸಿಸಿರುತ್ತೇನೆಯೇ ಅಂದರೆ ಇಲ್ಲ ನಾನೇ ಖುದ್ದಾಗಿ ಹೋಗಿ ಕೇಳಿರುತ್ತೇನೆ ಎನ್ನುತ್ತಾರೆ. ನಾನು ಪ್ರತಿವಾದಿ ಮನೆಗೆ ಹೋಗಿ ಕೇಳಿದ ಬಗ್ಗೆ ನನ್ನ ನೋಟೀಸ್ ನಲ್ಲಾಗಲೀ , ವಾದ ಪತ್ರದಲ್ಲಾಗಲೀ ಹೇಳಿ ಬರೆಸಿರುತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ಇದೇ ಮೊದಲ ಬಾರಿಗೆ ನಾನು ಪ್ರತಿವಾದಿ ಮನೆಗೆ ಹೋಗಿ ಕೇಳಿರುತ್ತೇನೆ ಎಂದರೆ ಸರಿ . ಪ್ರತಿವಾದಿ ಯಾವ ಸ್ವತನ್ನು ತೋರಿಸಿದ್ದರೂ ಅದೇ ಸ್ವತ್ತನ್ನು ನನಗೆ ಕ್ರಯ ಮಾಡಿ ಸ್ವತ್ತಿನ ಸ್ವಾಧೀನವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಕ್ರಯಕ್ಕಿಂತ ಮುಂಚೆ ಪರಿಶೀಲನೆ ಮಾಡಿದ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳೇ ಆಗಿರುತ್ತದೆ ಎಂದರೆ ಸರಿ . ಆದರೆ ಜಾಗ ಅದಲ್ಲ ಎನ್ನುತ್ತಾರೆ.

ಅದೇ ಜಾಗ ಆಗಿದ್ದರುೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರ ಆದ ದಿನದಿಂದ ಇಲ್ಲಿಯವರೆಗುೂ ನಾನು ಗಟ್ಟ ಕಾಮದೇನಹಳ್ಳಿ ಗೆ ಹೋಗಿ ದಾವಾ ಸ್ವತ್ತಿಗೆ ಸೇರಿದ ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸದರಿ ಸ್ವತಿನ ಖಾತೆ ಮಾಡಲು ಆಗುವುದಿಲ್ಲ ಅದು ನಕಲಿ ಖಾತೆ ಆಗಿರುತ್ತದೆ ಎಂದು ಹೇಳಿದ್ದಕ್ಕೆ ಮಾಡಿಸಿಲ್ಲ ಎನ್ನುತ್ತಾರೆ. ನಾನು ಖಾತಾ ಮಾಡಲು ಸಲ್ಲಿಸಿದ ಅರ್ಜಿ ನಕಲು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ . ಸದರಿ ಗ್ರಾಮದವರು ಖಾತೆ ಮಾಡಲು ಆಗುವುದಿಲ್ಲ ಎಂದು ಹೇಳಿದ ಬಗ್ಗೆ ಕೂಡ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ . ಸಂಬಂಧಿತ ಅಧಿಕಾರಿಗಳು ದಾವಾ ಸ್ವತ್ತಿನ ಖಾತಾ ಮಾಡಲು ಆಗುವುದಿಲ್ಲ ಎಂದು ಹೇಳಿದ ನಂತರ ಅವರ ವಿರದ್ದ ಕೇಸನ್ನು ಏನಾದರೂ ದಾಖಲಿಸಿರುತೀರಾ ಎಂದರೆ ಇಲ್ಲ ಎನ್ನುತ್ತಾರೆ. 2017 ರಿಂದ ಇಲ್ಲಿಯವರೆಗೂ ದಾವಾ ಸ್ವತ್ತಿಗೆ ಸಂಬಂಧಿಸಿದ ಕಂದಾಯ ಕಟ್ಟಿಲ್ಲ ಎಂದರೆ ಸರಿ .

ನಾನು ಮತ್ತು ರಾಜಾಸಿಂಗ್ ಸೇರಿ ಪ್ರತಿವಾದಿಗಳಿಗೆ ಮೋಸ ಮಾಡಿ ಅವರಿಂದ ಕ್ರಯಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಕ್ರಯ ಆದಾಗಿನಿಂದಲೂ ನಾನೇ ಸದರಿ ಸ್ವತ್ತಿನ ಸ್ವಾಧೀನ ಅನುಬೋಗದಲ್ಲಿ ಇರುತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಯಾರೋ ಕಲ್ಲು ಹಾಕಿರುತ್ತಾರೆ ಎನ್ನುತ್ತಾರೆ. ಯಾವಾಗ ಹಾಕಿರುತ್ತಾರೆ ಎಂದರೆ 2017 ರಲ್ಲಿ ಎನ್ನುತ್ತಾರೆ. ಆ ರೀತಿ ಕಲ್ಲು ಹಾಕಿದ ವ್ಯಕ್ತಿಯ ಮೇಲೆ ಪ್ರಕರಣ ದಾಖಲು ಮಾಡಿರುತ್ತಿರಾ ಎಂದರೆ ಇಲ್ಲ ಎನ್ನುತ್ತಾರೆ. ಕ್ರಯಪತ್ರದಲ್ಲಿ 6 ಲಕ್ಷ 50 ಸಾವಿರ ಹಣ ತಿಂಗಳಿಗೆ ಶೇ.2 ರಂತೆ ಬಡ್ಡಿ ಕೊಡಬೇಕೆಂದು ಏನಾದರೂ ಬರೆಯಲಾಗಿದೆಯಾ ಅಂದರೆ ಇಲ್ಲ ಎನ್ನುತ್ತಾರೆ. ನಾನು ಪ್ರತಿವಾದಿಗಳಿಗೆ 6 ಲಕ್ಷ 50 ಸಾವಿರ ಹಣ ನೀಡಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ . 1 ನೇ ಪ್ರತಿವಾದಿಯ ಬೇರೆ ಸ್ವತ್ತುಗಳು ಏನಾದರೂ ಇದೆಯಾ ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕ 07.07.2015 ರ ಕ್ರಯದ ಕರಾರಿನ ನಕಲು ನನ್ನ ಬಳಿ ಇದೆಯಾ ಅಂದರೆ ಇಲ್ಲ ಎನ್ನುತ್ತಾರೆ. ಸದರಿ 07.07.2015 ರ ಕರಾರು ಪತ್ರದ ನಕಲು ಯಾರ ಬಳಿ ಇದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಬಗ್ಗೆ ನನ್ನ ವಾದ ಪತ್ರದಲ್ಲಿ ಹೇಳಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿ ನನ್ನಿಂದ 6 ಲಕ್ಷ 50 ಸಾವಿರ ಹಣ ಅಥವಾ 4 ಲಕ್ಷ 13 ಸಾವಿರ ಹಣವನ್ನು ಕ್ರಯದ ಮೊತ್ತವೆಂದು ಸ್ವೀಕರಿಸಿಲ್ಲ ಮತ್ತು ಮೇಲಿನ ಹಣಕ್ಕೆ ಶೇ. 2 ರಷ್ಟು ಬಡ್ಡಿಕೊಡುತ್ತೇವೆ ಎಂದು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ.

ದಿನಾಂಕ 10.10.2019 ರಂದು ನಿಪಿ 11 ರಂತೆ ನಾನು ಪ್ರತಿವಾದಿಗಳಿಗೆ ವಕೀಲರ ನೋಟೀಸನ್ನು ಕಳುಹಿಸಿರುತೇನೆ ಎಂದರೆ ಸರಿ . ಸದರಿ ನಿಪಿ 11 ರ ಆಧಾರದ ಮೇರೆಗೆ ದಾವೆ ಹಾಕಲು ಪ್ರಯತ್ನಿಸಿರುತ್ತೀರಾ ಎಂದರೆ ಹೌದು ಎನ್ನುತ್ತಾರೆ. ಈ ದಾವೆ ಸಲ್ಲಿಸಲು ನನ್ನ ಬಳಿ ನಿಪಿ 11 ನ್ನು ಕಳುಹಿಸಿದಾಗ ದುಡ್ಡು ಇರಲಿಲ್ಲ ಆದ ಕಾರಣ ಇನ್ನೊಂದು ನೋಟೀಸ್ 2020 ರಲ್ಲಿ ನೀಡಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಕ 02.03.2020 ರಂದು ಇನ್ನೊಂದು ನೋಟೀಸ್ ನ್ನು ಪ್ರತಿವಾದಿಗೆ ನೀಡಿರುತ್ತೇನೆ ಎಂದರೆ ಸರಿ . ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಎರಡು ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ನೋಟೀಸ್ ಗೆ ಪ್ರತಿವಾದಿಗಳು ದಿನಾಂಕ 19.03.2020 ಕ್ಕೆ ಉತ್ತರ ಸಹ ನೀಡಿರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ನಾನು ಮತ್ತು ರಾಜಾಸಿಂಗ್ ಸೇರಿ 1 ನೇ

ಪ್ರತಿವಾದಿ ವಿಧವೆ ಎಂದು ಗೊತ್ತಿದ್ದರೂ ಸಹ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನಿಂದ ಪ್ರತಿವಾದಿ ಕ್ರಯದ ಮೌಲ್ಯ ಪಡೆದುಕೊಂಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಾಸಿಂಗ್ ಈಗಲೂ ಜೀವಂತವಾಗಿದ್ದಾನೆ ಎಂದರೆ ಸರಿ. ತುಳಸಿ ನನ್ನ ಸಹೋದರಿ. ನಿಪಿ 2 ಕ್ರಯ ಪತ್ರಕ್ಕೆ ಪ್ರತಿವಾದಿಗಳನ್ನು ಹೊರತುಪಡಿಸಿ ಅವರ ಸಂಬಂಧಿಕರು ಮತ್ಯಾರಾದರೂ ಸಹಿ ಮಾಡಿರುತ್ತಾರೆಯೇ ಅಂದರೇ ಇಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್)
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್